| O.S | 212/2018 |
|---|---|
| P.W. | 1 |

ದಿನಾಂಕ : 17-07-2021 ರಂದು ಪಾಟೀ ಸವಾಲಿಗೆ ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು ಪ್ರತಿವಾದಿ ಪರ ವಕೀಲರಿಂದಃ**

5. ವಾದಿ ಟ್ರಸ್ಟ್ ನೋಂದಣಿಯಾದ ಬಾಬ್ತು ದಾಖಲೆಗಳನ್ನು ನಾನು ಹಾಜರುಪಡಿಸಬಲ್ಲೆ. ವಾದಿ ಟ್ರಸ್ಟ್‌ನಲ್ಲಿ ನಾನು Administrator, Property Legal and Rent ಆಗಿ 2010 ರ ನಂತರದಿಂದ ಕೆಲಸ ಮಾಡುತ್ತಿದ್ದೇನೆ. 2010 ಕ್ಕೂ ಮುನ್ನ ವಾದಿ ಟ್ರಸ್ಟ್‌ನಲ್ಲಿಯೇ ಸಹಾಯಕನಾಗಿ 2007 ರಿಂದ ಕೆಲಸ ಮಾಡುತ್ತಿದ್ದೆ. 2007ಕ್ಕೂ ಮುನ್ನ ನಾನು ವಾದಿ ಟ್ರಸ್ಟ್‌ನ ಕೇವಲ ಸದಸ್ಯನಾಗಿದ್ದೆ. ವಾದಿ ಟ್ರಸ್ಟ್ ನೋಂದಣಿಯಾದ ದಿನದಿಂದಲೂ ಸಹ ನಾನು ಸದಸ್ಯನಾಗಿದ್ದೇನೆ. ಬರ್ನಾಡ್ ಮೊರಸ್ ಈ ದಾವೆ ಹಾಕುವ ಸಮಯಕ್ಕೆ ಬೆಂಗಳೂರಿನ ಆರ್ಕ ಬಿಷಪ್ ಆಗಿದ್ದರೂ ಇಲ್ಲವೋ ಎಂದು ತೋರಿಸಲು ನಾನು ಯಾವುದೇ ದಾಖಲೆ ಹಾಜರುಪಡಿಸಿಲ್ಲ. ಬರ್ನಾಡ್ ಮೊರಸ್ ನಂತರ ಪೀಟರ್ ಮೊಕ್ಯಾಡೋ ಆರ್ಕಬಿಷಪ್ ಆಗಿದ್ದರ ಬಾಬ್ತು ನಾನು ದಾಖಲೆ ಹಾಜರುಪಡಿಸಿಲ್ಲ.

6. ನಿಪಿ-2 ಹಾಗು 3 ರ ಬರವಣಿಗೆ, ನೋಂದಣಿ ಕಾಲದಲ್ಲಿ ನಾನು ಖುದ್ದಾಗಿ ಹಾಜರಿರಲಿಲ್ಲ. ನಿಪಿ-2 ಹಾಗು 3 ರ ನೋಂದಣಿ ಸಮಯದಲ್ಲಿ ನಾನು ವಾದಿ ಟ್ರಸ್ಟ್‌ನ ಸದಸ್ಯನಾದ ಕಾರಣ ಇದರ ಬಗ್ಗೆ ನನಗೆ ಮಾಹಿತಿ ಇತ್ತು. ವಾದಿ ಟ್ರಸ್ಟ್‌ನ ಮೂಲ ಕಾರ್ಯನಿರ್ವಾಹಕರು ಆರ್ಕ್ ಬಿಷಪ್ ಬರ್ನಾಡ್ ಮೊರಸ್ ಇದರ ಫಲಾನುಭವಿಗಳು ಯಾರು ಎಂದು ಪತ್ರದಲ್ಲಿ ನಮೂಧಿಸಲಾಗಿದೆ ಎಂದು ನನಗೆ ಗೊತ್ತಿಲ್ಲ. ನಿಪಿ-2 ಹಾಗು 3 ಬರ್ನಾಡ್ ಮೊರಸ್ ಹೆಸರಿನಲ್ಲಿ ಬರೆಯಲಾಗಿಲ್ಲ ಎಂದರೆ ಸರಿ.

7. ನಿಪಿ-2 ಹಾಗು 3 ನೆಲಮಂಗಲ ತಾಲ್ಲೂಕು, ವಾಜರಹಳ್ಳಿ ಗ್ರಾಮದ ಸರ್ವೆ ನಂ.39 ಕ್ಕೆ ಸಂಬಂಧಿಸಿದೆ ಎಂದರೆ ಪತ್ರದಲ್ಲಿ ಹಾಗೆ ಬರೆದಿದೆ ಆದರೆ ಅದು ನೆಲಮಂಗಲ ಗ್ರಾಮ ಎಂಬುದಾಗಿ ಆಗಬೇಕಿತ್ತು. ವಕೀಲರಾದ ಪ್ಯಾಟ್ರಿಕ್ ಡಿಸೋಜ ನಿಪಿ-2 ಹಾಗು 3 ಕರಡನ್ನು ತಯಾರಿಸಿದರು. ಸದರಿ ಕರಡನ್ನು ತಯಾರಿಸಲು ಟ್ರಸ್ಟ್ ವತಿಯಿಂದ ಮಾಹಿತಿ ನೀಡಲಾಗಿತ್ತು. ನನಗೆ ನೆನಪಿದ್ದಂತೆ ಸದರಿ ಕರಡನ್ನು ತಯಾರಿಸುವ ಸಂದರ್ಭದಲ್ಲಿ ಆಸ್ತಿಯ ಮೂಲ ದಾಖಲೆ, ಇಸಿ ಹಾಗು ಶಿಕ್ಷಣಕ್ಕಾಗಿ ಭೂ ಪರಿವರ್ತನಾ ಆದೇಶ ಇವುಗಳನ್ನು ನೋಡಿದ್ದೆವು.

ಪ್ರಶ್ನೆಃ ವಕೀಲರು ಸದರಿ ದಾಖಲೆಗಳನ್ನು ಪರಿಶೀಲಸಿಸಿದ್ದಾರೆ ಎಂದು ನನಗೆ ಯಾರು ಹೇಳಿದರು?

ಉತ್ತರಃ ದಾಖಲೆಗಳನ್ನು ಟ್ರಸ್ಟ್‌ವತಿಯಿಂದ ನೀಡಲಾಗಿತ್ತು ಇದರಿಂದ ನನಗೆ ತಿಳಿದಿದೆ.

| O.S | 212/2018 |
|---|---|
| P.W. | 1 |

ಸದರಿ ದಾಖಲೆಗಳು ನೆಲಮಂಗಲ ಗ್ರಾಮಕ್ಕೆ ಸೇರಿದ್ದಾಗಿತ್ತು. ನಿಪಿ-2 ಹಾಗು 3 ಬೇರೆ ಬೇರೆ ದಿನಾಂಕಗಳಂದು ನೋಂದಣಿಯಾಗಿದೆ ಎಂದರೆ ಸರಿ. ಸದರಿ ದಾಖಲೆಗಳು ಬೇರೆ ಬೇರೆ ದಿನಾಂಕಗಳಂದು ಏಕೆ ನೋಂದಣಿಯಾಗಿದೆ ಎಂದು ನನಗೆ ನೆನಪಿಲ್ಲ. ಬಹುಷಃ ಹಣಕಾಸಿನ ವ್ಯವಸ್ಥೆಗಾಗಿ ಬೇರೆ ಬೇರೆ ದಿನಾಂಕಗಳಂದು ಪತ್ರ ವ್ಯವಹಾರವಾಗಿದೆ. ನಿಪಿ-2 ಹಾಗು 3 ರ ಮುದ್ರಾಂಕ ಶುಲ್ಕದ ಪಾವತಿ ಸಮಯದಲ್ಲಿ ವಾಜರಹಳ್ಳಿ ಗ್ರಾಮದ ಆಸ್ತಿಗೆಂದೇ ಪಾವತಿಸಲಾಗಿದೆ ಎಂದರೆ ಸುಳ್ಳು.

8. ವಾಜರಹಳ್ಳಿ ಗ್ರಾಮಕ್ಕೂ ದಾವಾಸ್ತಿಗಳಿಗೂ ಎಷ್ಟು ಅಂತರವಿದೆ ಎಂದು ನನಗೆ ಗೊತ್ತಿಲ್ಲ. ನಿಪಿ-2 ಹಾಗು 3 ರ ನಂತರ ಖಾತಾಬದಲಾವಣೆಗೆ ಪ್ರಯತ್ನ ಪಟ್ಟಿದ್ದಿರಾ ಎಂದರೆ ಮಾಡಿದ್ದೇವೆ ಯಾವಾಗ ಎಂದು ನೆನಪಿಲ್ಲ. ದಾವಾಸ್ತಿಗಳ ಖಾತೆ ವಾದಿಗಳ ಹೆಸರಿಗೆ ಆಗಿದೆಯೋ ಇಲ್ಲವೋ ನನಗೆ ನೆನಪಿಲ್ಲ.

9. ನಿಪಿ-2 ಹಾಗು 3 ರಡಿಯಲ್ಲಿ ಖರೀದಿಸಿದ್ದರ ಆಸ್ತಿಯ ವಿವರಗಳನ್ನು ಹೇಳಲು ಸಾಧ್ಯವೇ ಎಂದರೆ ನಿಪಿ-2 ಹಾಗು 3 ರಡಿಯಲ್ಲಿ ನೆಲಮಂಗಲ ತಾಲ್ಲೂಕಿನ ಸರ್ವೆ ನಂ.39 ರ 1-10 ಗುಂಟೆ ಖರೀದಿಸಲಾಗಿತ್ತು. ಸದರಿ ಆಸ್ತಿಯ ಪೂರ್ವ ಹಾಗು ದಕ್ಷಿಣಕ್ಕೆ ರಸ್ತೆ ಬಂದು, ಉತ್ತರ ಹಾಗು ಪಶ್ಚಿಮಕ್ಕೆ ಖಾಸಗಿ ಸ್ವತ್ತು ಬರುತ್ತದೆ.

9. 2003-04 ರಲ್ಲಿ ದಾವಾಸ್ತಿಗಳಲ್ಲಿ ಶೈಕಕ್ಷಣಿಕ ಉದ್ದೇಶಕ್ಕೆ ಕಟ್ಟಡ ನಿರ್ಮಾಣ ಮಾಡಲು ದಾಖಲೆಗಳನ್ನು ಪರಿಶೀಸುತ್ತಿರುವಾಗ, ಗ್ರಾಮದ ಹೆಸರಿನಲ್ಲಿ ಆದ ವ್ಯತ್ಯಾಸ ತಿಳಿಯಿತು. ಸದರಿ ಕ್ರಯಪತ್ರಗಳಲ್ಲಿ ಆದ ವ್ಯತ್ಯಾಸವನ್ನು ತಿದ್ದಿಕೊಡಲು 2ನೇ ಪ್ರತಿವಾದಿಯ ಬಳಿ ಕೇಳಿಕೊಂಡಿದ್ದೇವು ಆದರೆ ಅವರು ಒಪ್ಪಿರಲಿಲ್ಲ. ಕ್ರಯಪತ್ರಗಳಲ್ಲಿ ಆದ ವ್ಯತ್ಯಾಸದ ತಿದ್ದುಪಡಿಗಾಗಿ ನ್ಯಾಯಾಲಯದಲ್ಲಿ 2004 ರಲ್ಲಿ ದಾವೆ ಹೂಡಲಾಗಿತ್ತು ಅದು ಅಸಲು ದಾವೆ ನಂ. 520.05. ಈ ರೀತಿ ಆದ ತಪ್ಪನ್ನು ತಿದ್ದುಪಡಿ ಪತ್ರ ಬರೆದುಕೊಡಲು 2ನೇ ಪ್ರತಿವಾದಿಯ ಬಳಿ ಸದರಿ ಅಸಲು ದಾವೆ 520.2005 ಹಾಕುವುದಕ್ಕೂ ಪೂರ್ವ 2-3 ವರ್ಷಗಳವರೆಗೂ ಕೇಳಿಕೊಂಡಿದ್ದೇವು. ಸದರಿ 2ನೇ ಪ್ರತಿವಾದಿ ಹೆಚ್ಚಿನ ಹಣವನ್ನು ಕೇಳಿದ್ದರು. ಕ್ರಯಪತ್ರಗಳಲ್ಲಾದ ತಪ್ಪು ತಿಳಿದ ತಕ್ಷಣ ದಾವೆ ಸಲ್ಲಿಸಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ಇದನ್ನು ಶಾಂತಿಯುತವಾಗಿ ಯಾವುದೇ ವ್ಯಾಜ್ಯವಿಲ್ಲದೇ ಬಗೆಹರಿಸಿಕೊಳ್ಳಲು ಪ್ರಯತ್ನಿಸಿದೇವು.

10. ನೆಲಮಂಗಲ ಗ್ರಾಮದ ಸರ್ವೆ ನಂ.39 ರ 1-10 ಗುಂಟೆ ಜಮೀನಿಗೆ ವಾದಿ ವತಿಯಿಂದ ಕ್ರಯಪತ್ರವಾದ ತಕ್ಷಣವೇ ಮುಳ್ಳುತಂತಿಯನ್ನು ಹಾಕಿಸಿದ್ದೇವು. ನಿಪಿ-2 ಹಾಗು 3 ರ ಒಟ್ಟು 1-10 ಗುಂಟೆಗೆ ಒಂದೇ ಚೆಕ್ಕುಬಂಧಿಯಲ್ಲಿ ಮುಳ್ಳುತಂತಿ ಹಾಕಲಾಗಿದೆ. ನಿಪಿ-2 ಹಾಗು 3 ರ ನೋಂದಣಿಯಾದ ಕೂಡಲೇ ರುಣಭಾರ ರಾಹಿತ್ಯ ಪ್ರಮಾಣಪತ್ರದಲ್ಲಿ ವಾಜರಹಳ್ಳಿ ಗ್ರಾಮದ ಸರ್ವೆ. 39 ಎಂಬುದಾಗಿ ನಮೂದಾಗಿದೆ ಎಂದರೆ ಆಗ ಅದನ್ನು ಗಮನಿಸಿರಲಿಲ್ಲ. ನಿಪಿ-13ನ್ನು ನಾನು ಪರಿಶೀಲಿಸಿಲ್ಲ.

ನಿಪಿ-9 ರಿಂದ 12 ದಾಖಲೆಗಳನ್ನು ನಾನು ನೋಡಿ ಪರಿಶೀಲಿಸಿದ್ದೇನೆ. 2004 ರಲ್ಲಿ ನೆಲಮಂಗಲ ಗ್ರಾಮದ ಸರ್ವೆ ನಂ.39 ರ 1-10 ಗುಂಟೆಯು 2ನೇ ಪ್ರತಿವಾದಿಯ ಹೆಸರಿಗೆ ವಾಸಕ್ಕಾಗಿ ಭೂ ಪರಿವರ್ತನೆಯಾಗಿದೆ ಎಂದರೆ ನನಗೆ ಗೊತ್ತಿಲ್ಲ.

11. ಭೂ ಪರಿವರ್ತನಾ ಕ್ರಮದ ಬಗ್ಗೆ ನನಗೆ ಮಾಹಿತಿ ಇಲ್ಲ. ಭೂ ಪರಿವರ್ತನಾ ಆದೇಶದ ಮುನ್ನ ಗ್ರಾಮ ಲೆಕ್ಕಾಧಿಕಾರಿ, ಕಂದಾಯ ಅಧಿಕಾರಿಗಳು, ತಹಶೀಲ್ದಾರ್‌ರು ಖುದ್ದಾಗಿ ಜಾಗ ಪರಿಶೀಲನೆ ಮಾಡಿ ವಿಭಾಗಾಧಿಕಾರಿಗಳಿಗೆ ವರದಿ ಸಲ್ಲಿಸುತ್ತಾರೆ ಎಂದರೆ ಸರಿ. 2004 ರಲ್ಲಿ ಈ ರೀತಿಯಾಗಿ ಎಲ್ಲಾ ಕಾನೂನು ಪ್ರಕ್ರಿಯೆಗಳನ್ನು ಪಾಲಿಸಿಯೇ ವಾಸದ ಉದ್ದೇಶಕ್ಕಾಗಿ 2ನೇ ಪ್ರತಿವಾದಿಗೆ ಭೂ ಪರಿವರ್ತನಾ ಆದೇಶವಾಗಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಚಾರ ನನಗೆ ಗೊತ್ತಿದ್ದರೂ ಸಹ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂರದೆ ಸರಿಯಲ್ಲ. ಸದರಿ ಭೂ ಪರಿವರ್ತನಾ ಆದೇಶದ ತರುವಾಯ ಅಂದಿನ ನೆಲಮಂಗಲ ಪಟ್ಟಣ ಪಂಚಾಯಿತಿಯಿಂದ 2ನೇ ಪ್ರತಿವಾದಿಯ ಹೆಸರಿಗೆ ಖಾತೆ ಬದಲಾವಣೆಯಾಗಿದೆ ಎಂದರೆ ನನಗೆ ಗೊತ್ತಿಲ್ಲ. ದಿನಾಂಕ 16.2.2015 ರಂದು 2 ಮತ್ತು 3ನೇ ಪ್ರತಿವಾದಿಗಳು ಎನ್.ನಾರಾಯಣಸ್ವಾಮಿ ಹಾಗು ರವಿ ರವರಿಗೆ ದಾವಾಸ್ತಿಯ ಬಾಬ್ತು ಸಾಮಾನ್ಯ ಮುಕ್ತಾರ್ ನಾಮೆ ಬರೆದುಕೊಟ್ಟಿದ್ದಾರೆ ಎಂದರೆ 2015 ರಲ್ಲಿ ಇದರ ಬಗ್ಗೆ ನನಗೆ ತಿಳಿಯಿತು. ದಾವಾಸ್ತಿಯನ್ನು ನಿವೇಶನಗಳಾಗಿ ವಿಂಗಡಿಸಿ 1ನೇ ಪ್ರತಿವಾದಿ ಮತ್ತು ಇತರರಿಗೆ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಇದರ ಬಗ್ಗೆ 2015 ರಲ್ಲಿ ತಿಳಿಯಿತು. ನಿಪಿ-5 ರಿಂದ 7 ದಾವಾಸ್ತಿಗೆ ಸಂಬಂಧಿಸಿದ ಛಾಯಚಿತ್ರಗಳು ಎಂದರೆ ಸರಿ. ನಿಪಿ-7 ರಲ್ಲಿ ಕಾಣುವ ಕಲ್ಲುಕಂಬ ಸ್ವತ್ತಿನ ಮಧ್ಯ ಭಾಗದಲ್ಲಿ ಬರುತ್ತದೆ ಎಂದರೆ ಸುಳ್ಳು.

12. ಇತಿಚೇಗೂ ಸಹ ನಾನು ದಾವಾಸ್ತಿಯನ್ನು ಪರಿಶೀಲಿಸಿದ್ದೇನೆ. ಈಗ ತೋರಿಸುತ್ತಿರುವ ಛಾಯಚಿತ್ರ ಯಾವುದೇ ಎಂದು ನನಗೆ ಗೊತ್ತಿಲ್ಲ. ಈಗ ತೋರಿಸುತ್ತಿರುವ ಛಾಯಚಿತ್ರದಲ್ಲಿ ಕಾಣಿಸುತ್ತಿರುವ ಕಟ್ಟಡ ಯಾವಾ ಸರ್ವೆ ನಂಬರ್‌ನಲ್ಲಿದೆ ಎಂದು ನನಗೆ ಗೊತ್ತಿಲ್ಲ. ದಾವಾಸ್ತಿಗೆ ಸಂಪರ್ಕ ಸಾಧಿಸಲು ರಸ್ತೆ, ವಿದ್ಯುತ್ ದೀಪಗಳು ಹಾಗು ಚರಂಡಿಗಳನ್ನು ಮಾಡಿದ್ದಾರೆ ಎಂದರೆ ಗೊತ್ತಿಲ್ಲ. ಪ್ರಸ್ತುತ ದಾವಾಸ್ತಿ ಯಾವ ಸ್ಥಿತಿಯಲ್ಲಿದೇ ಎಂದು ತೋರಿಸಲು ಛಾಯಚಿತ್ರವನ್ನು ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ. ನಿಪಿ-5 ಹಾಗು 6 ರಲ್ಲಿರುವ ಕಟ್ಟಡ ಗ ದಾವಾಸ್ತಿಯುಲ್ಲಿ ಬರುತ್ತದೆ ಎಂದರೆ ಸರಿ. ಸದರಿ ಕಟ್ಟಡವನ್ನು 1ನೇ ಪ್ರತಿವಾದಿ ನಿರ್ಮಿಸಿದ್ದಾರೆ ಎಂದರೆ ಸರಿ. ಸದರಿ ಕಟ್ಟಡ ಯಾವಾಗ ನಿರ್ಮಾಣವಾಗಿದೆ ಎಂದು ನನಗೆ ಗೊತ್ತಿಲ್ಲ. ಸದರಿ ಕಟ್ಟಡವನ್ನು ನಾನು ಮೊದಲ ಬಾರಿಗೆ ಯಾವಾಗ ನೋಡಿದೆ ಎಂದು ನನಗೆ ನೆನಪಿಲ್ಲ. 1ನೇ ಪ್ರತಿವಾದಿ ನಿಪಿ-5 ಹಾಗು 6 ರಲ್ಲಿರುವ ಕಟ್ಟಡವನ್ನು ಸ್ವತ್ತನ್ನು ಖರೀದಿಸಿದ ಕೆಲವೇ ತಿಂಗಳಲ್ಲಿ ನಿರ್ಮಿಸಿದ್ದಾರೆ ಎಂದರೆ ಸುಳ್ಳು. ಖರೀದಿಸಿದ ದಿನಾಂಕದಿಂದಲು 1ನೇ ಪ್ರತಿವಾದಿ ಮತ್ತು ಕುಟುಂಬ ಸದರಿ ಕಟ್ಟಡದ ಸ್ವಾಧೀನದಲ್ಲಿದೆ ಎಂದರೆ ಸುಳ್ಳು. ಸದರಿ ಕಟ್ಟಡದಲ್ಲಿ ಯಾರು ಸ್ವಾಧೀನಾನುಭವದಲ್ಲಿದ್ದಾರೆ ಎಂದು ನನಗೆ ಗೊತ್ತಿಲ್ಲ. ಸದರಿ ಕಟ್ಟಡದ ಸ್ವಾಧೀನಾನುಭವದ ಬಗ್ಗೆ ನಾನು ವಿಚಾರಿಸಿದರೂ ಸಹ ನನಗೆ ವಿಷಯ ತಿಳಿಯಲಿಲ್ಲ. ನಿಪಿ-5 ಹಾಗು 6 ಛಾಯಚಿತ್ರಗನ್ನು ಪಡೆದಾಗ ಕಟ್ಟಡದ ಸ್ವಾಧೀನಾನುಭವದ ಬಗ್ಗೆ ವಿಚಾರಿಸಿದ್ದೇವು ಕಟ್ಟಡದ ಛಾಯಚಿತ್ರವನ್ನು ಯಾವಾಗ ತೆಗೆದರು

| O.S | 212/2018 |
|---|---|
| P.W. | 1 |

ಎಂದು ನನಗೆ ಗೊತ್ತಿಲ್ಲ. 1ನೇ ಪ್ರತಿವಾದಿಯ ಪತ್ನಿ ಸದರಿ ಕಟ್ಟಡದ ಒಂದು ಭಾಗದಲ್ಲಿ ಹೊಲಿಗೆಯ ತರಭೇತಿಯನ್ನು ನೀಡುತ್ತಿದ್ದಾರೆ ಎಂದರೆ ಸುಳ್ಳು. ಮತ್ತೊಂದು ಭಾಗದಲ್ಲಿ 1ನೇ ಪ್ರತಿವಾದಿ ಮತ್ತು ಕುಟುಂಬ ವಾಸವಿದ್ದಾರೆ ಎಂದರೆ ಸುಳ್ಳು. ನಿಪಿ-5 ಹಾಗು 6 ರಲ್ಲಿ ಕಂಡುಬರುವ ಕಟ್ಟಡ ಕಾಂಕ್ರೀಟ್‌ನದ್ದು ಎಂದರೆ ಸರಿ. 1ನೇ ಪ್ರತಿವಾದಿಗೆ ಈ ನ್ಯಾಯಾಲಯದಿಂದ ಸಮನ್ಸ್ ನಿಪಿ-5 ಹಾಗು 6 ರಲ್ಲಿರುವ ಕಟ್ಟಡದ ವಿಳಾಸಕ್ಕೆ ಜಾರಿಯಾಗಿದೆ ಎಂದರೆ ನೆನಪಿಲ್ಲ. ಸದರಿ ಕಟ್ಟಡಕ್ಕೆ 1ನೇ ಪ್ರತಿವಾದಿ ವಿದ್ಯುತ್‌ಚ್ಛಕ್ತಿ ಹಾಗು ನೀರಿನ ಸಂಪರ್ಕ ಪಡೆದುಕೊಂಡಿದ್ದಾರೆ ಎಂದರೆ ಗೊತ್ತಿಲ್ಲ. ನಿಪಿ-5 ರಿಂದ 7 ಛಾಯಚಿತ್ರಗಳಲ್ಲಿ ವಿದ್ಯುತ್ ಕಂಬಗಳು ಕಂಡುಬರುತ್ತಿವೆ ಎಂದರೆ ಸರಿ. ನಿಪಿ-6 ರಲ್ಲಿ ಚರಂಡಿ ಕಂಡುಬರುತ್ತಿದೆ ಎಂದರೆ ಸರಿ. ನಿಪಿ-6 ರಲ್ಲಿ ಕಂಡು ಬರುವ ತಂತಿಬೇಲಿ ದಾವಾತಪಾಸೀಲು **ಗ** ಸ್ವತ್ತಿನಲ್ಲಿ ಬರುತ್ತದೆ ಎಂದರೆ ಸರಿ. ಸದರಿ ತಂತಿಬೇಲಿಯನ್ನು 1ನೇ ಪ್ರತಿವಾದಿ ಹಾಕಿ ದಾವಾತಪಾಸೀಲು **ಗ** ಸ್ವತ್ತಿನಲ್ಲಿ ಸ್ವಾಧೀನಾನುಭವ - ದಲ್ಲಿದ್ದಾರೆ ಎಂದು ನನಗೆ ಗೊತ್ತಿಲ್ಲ.

12. 2005 ರಲ್ಲಿ ನಾನು ದಾವಾಸಲ್ಲಿಸುವ ಸಂದರ್ಭದಲ್ಲಿ 2 ಹಾಗು 3ನೇ ಪ್ರತಿವಾದಿಗಳು ನಾರಾಯಣಸ್ವಾಮಿ ಹಾಗು ರವಿರವರಿಗೆ ಸಾಮಾನ್ಯ ಮೊಕ್ತರ್ ನಾಮೆ ಬರೆದುಕೊಟ್ಟ ವಿಚಾರ ನನಗೆ ಗೊತ್ತಿತ್ತು ಎಂದರೆ ಸರಿ. ಅದೇ ರೀತಿ 2005 ರಲ್ಲಿ ಸಾಮೂನ್ಯ ಮೊಕ್ತರ ನಾಮೆ ಮೇರೆಗೆ ಆಸ್ತಿಗಳನ್ನು ಮಾರಾಟ ಮಾಡಿದ ಬಗ್ಗೆ ನನಗೆ ಗೊತ್ತಿತ್ತು ಎಂದರೆ ಸುಳ್ಳು. 2005 ರಲ್ಲಿ ನಾನು ಕ್ರಯಪತ್ರದ ತಿದ್ದುಪಡಿಗಾಗಿ ದಾವೆಯನ್ನು ಸಲ್ಲಿಸಿರಲಿಲ್ಲ ಎಂದರೆ ಸುಳ್ಳು. ನಿಪಿ-10 ರಲ್ಲಿ ಕ್ರಯಪತ್ರದ ತಿದ್ದುಪಡಿ ಆದೇಶವಾಗಿಲ್ಲ ಎಂದರೆ ಸರಿ, 2017 ರಲ್ಲಿ ಆಗಿದೆ. 2017 ರ ವರೆಗೂ ತಿದ್ದುಪಡಿಗಾಗಿ ಏಕೆ ದಾವೆಯನ್ನು ಸಲ್ಲಿಸಿರಲಿಲ್ಲ ಎಂದರೆ ಘೋಷಣಾ ಆದೇಶದ ಮೆರೆಗೆ ಉಪನೋಂದಣಾಧಿಕಾರಿಗಳನ್ನು ತಿದ್ದುಪಡಿಗಾಗಿ ಕೇಳಿದಾಗ ನಿಖರವಾಗಿ ತಿದ್ದುಪಡಿಗೆ ಆದೇಶವಾಗಬೇಕು ಎಂದು ಸೂಚಿಸಿದರು ಈ ಕಾರಣದಿಂದ 2017 ರಲ್ಲಿ ದಾವೆ ಹಾಕಲಾಗಿತ್ತು. 2010 ರಲ್ಲಿ ಘೋಷಣಾ ಆದೇಶವಾಗಿದ್ದರು ಸಹ ಉಪನೋಂದಣಾಧಿಕಾರಿಗಳ ಬಳಿ ತಿದ್ದು ಪಡಿಗೆ ಏಕೆ ಹೋಗಲಿಲ್ಲ ಎಂದರೆ ಕೇವಲ ಕಟ್ಟಡ ನಿರ್ಮಾಣದ ಸಮಯದಲ್ಲಿ ಪತ್ರಗಳನ್ನು ಮತ್ತೊಮ್ಮೆ ಪರಿಶೀಲಿಸಿದ್ದೇವು.

13. ಅಸಲು ದಾವಾ ಸಂಖ್ಯೆ 268.2009, ಅಸಲು ದಾವಾ 21.2017 ರಲ್ಲಿ ನಾರಾಯಣಸ್ವಾಮಿ, ರವಿ ಹಾಗು ಖರೀದಿದಾರರನ್ನು ಪಕ್ಷಗಾರರನ್ನಾಗಿ ಮಾಡಿರಲಿಲ್ಲ ಎಂದರೆ ಸರಿ. ಸದರಿ ವ್ಯಕ್ತಿಗಳಿಗೆ ಮಾರಾಟವಾದ ಬಗ್ಗೆ ನನಗೆ ತಿಳಿದಿದ್ದರೂ ಸಹ ಏಕೆ ಪಕ್ಷಗಾರರನ್ನಾಗಿ ಮಾಡಿರಲಿಲ್ಲ ಎಂದರೆ 2015 ರಲ್ಲಿ ಇವರ ಹೆಸರುಗಳು ನನಗೆ ತಿಳಿಯಿತು ಆದರೆ ಸೂಕ್ತ ದಾಖಲೆಗಳನ್ನು 2018 ರಲ್ಲಿ ಪಡೆದುಕೊಂಡಿದ್ದೇನೆ. ನಿಪಿ-2 ಹಾಗು 3 ರ ತಪಸೀಲು ಸ್ವತ್ತಿಗೂ 1ನೇ ಪ್ರತಿವಾದಿ ಖರೀಸಿದ ಸ್ವತ್ತುಗಳು ಬೇರೆ ಬೇರೆಯಾದ ಕಾರಣ 1ನೇ ಪ್ರತಿವಾದಿ, ಇತರ ಖರೀದಿದಾರರನ್ನು ಪಕ್ಷಗಾರರನ್ನಾಗಿ ಮಾಡಿರಲಿಲ್ಲ ಎಂದರೆ ಸುಳ್ಳು. ಪ್ರಸ್ತುತ ದಾವೆಯನ್ನು ಹೊರತುಪಡಿಸಿ 1ನೇ ಪ್ರತಿವಾದಿಯ ವಿರುದ್ಧ ಮತ್ತ್ಯಾವುದೇ ದಾವೆಯನ್ನು ಸಲ್ಲಿಸಿಲ್ಲ.

1ನೇ ಪ್ರತಿವಾದಿ <u>**ಗ**</u> ದಾವಾಸ್ತಿಗೆ ಸಂಬಂಧಪಟ್ಟ ಕಂದಾಯವನ್ನು ಖರೀಸಿದ ದಿನಾಂಕದಿಂದ ಪಾವತಿ ಮಾಡುತ್ತಾ ಬಂದಿದ್ದಾರೆ ಎಂದರೆ ಸುಳ್ಳು. ಈಗ <u>**ಗ**</u> ದಾವಾಸ್ತಿ 1ನೇ ಪ್ರತಿವಾದಿಯ ಹೆಸರಿಗೆ ಇದೆ. <u>**ಗ**</u> ದಾವಾಸ್ತಿಯ ದಕ್ಷಿಣ ಹಾಗು ಪಶ್ಚಿಮಕ್ಕೆ ರಸ್ತೆ ಬರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಿಪಿ-5 ಮತ್ತು 6 ಛಾಯಚಿತ್ರಗಳಲ್ಲಿ ಕಾಣುತ್ತಿರುವ ರಸ್ತೆ ಸ್ವತ್ತಿನ ದಕ್ಷಿಣಕ್ಕೆ ಬರುತ್ತದೆ ಎಂದರೆ ರಸ್ತೆ ಇರುವುದು ಸರಿ ಆದರೆ ದಿಕ್ಕು ನನಗೆ ಗೊತ್ತಿಲ್ಲ.

14. ನಿಪಿ-16 2016-17 ರ ಸಾಲಿಗೆ ಸಂಬಂಧಿಸಿದ್ದಾಗಿದ್ದು ಇದರ ಹಿಂದಿನ ಪಹಣಿಗಳು ಯಾರ ಹೆಸರಿಗೆ ಬರುತ್ತಿತ್ತು ಎಂದು ನನಗೆ ಗೊತ್ತಿಲ್ಲ. 2004 ರಿಂದ 2ನೇ ಪ್ರತಿವಾದಿಯ ಹೆಸರಿಗೆ ದಾವಾಸ್ತಿಯ ಪಹಣಿಪತ್ರಿಕೆ ಭೂ ಪರಿವರ್ತನೆ ಎಂಬುದಾಗಿ 9ನೇ ಕಾಲಂನಲ್ಲಿ ಬರುತ್ತಿದೆ ಎಂದರೆ ಗೊತ್ತಿಲ್ಲ. ನಿಪಿ-16 ವಾದಿಟ್ರಸ್ಟ್‌ನ ಹೆಸರಿಗೆ ಯಾವ ಆಧಾರದ ಮೇಲೆ ಖಾತಾ ಬದಲಾವಣೆಯಾಗಿದೆ ಎಂದು ನನಗೆ ನೆನಪಿಲ್ಲ.

15. ಅಸಲು ದಾವೆ 21.2017 ರ ಡಿಕ್ರಿಯ ಅಮಲ್‌ಜಾರಿಗೆ ಅರ್ಜಿಯನ್ನು ಸಲ್ಲಿಸಲಾಗಿದೆ. ಅಸಲು ದಾವೆ 268.2009 ಹಾಗು 21.2017 ದಾವೆಗಳು ಏಕಪಕ್ಷೀಯವಾಗಿ ಆದೇಶವಾಗಿವೆ ಎಂದರೆ ಸರಿ. ಎರಡು ದಾವೆಗಳಲ್ಲಿ 1ನೇ ಪ್ರತಿವಾದಿ ಪಕ್ಷಗಾರನಾಗಿರಲಿಲ್ಲ ಎಂದರೆ ಸರಿ. ನಿಪಿ-16 ರ ಕಾಲಂ 11 ರಲ್ಲಿ ಕಂಡುಬರುವ ಕಂದಾಯ ನ್ಯಾಯಾಲಯದ ಪ್ರಕರಣದ ವಿವರ ನನಗೆ ಗೊತ್ತಿಲ್ಲ. ದಾವಾಸ್ತಿಯ ಖರೀದಿದಾರರು ತಮ್ಮ ತಮ್ಮ ಆಸ್ತಿಗಳ ಸುತ್ತ ಮುಳ್ಳುತಂತಿ ನಿರ್ಮಿಸಿ ಇದರ ಸ್ವಾಧೀನಾನುಭವದಲ್ಲಿದ್ದಾರೆ ಎಂದರೆ ಸುಳ್ಳು.

16. ಅಸಲು ದಾವೆ 213.2018 ರಲ್ಲಿನ ಪಕ್ಷಗಾರರಾದ ರಾಮಕುಮಾರ್‌ಸ್ವಾಮಿರವರು ದಿನಾಂಕ 25-04-2005 ರಲ್ಲಿ ಖರೀದಿಸಿದ್ದರ ವಿಷಯ ನನಗೆ 2015 ರಲ್ಲಿ ನನಗೆ ಒಬ್ಬ ವ್ಯಕ್ತಿಯಿಂದ ತಿಳಿಯಿತು. ಸದರಿ ರಾಮಕುಮಾರ್‌ಸ್ವಾಮಿ ದಾವಾ <u>**ಕ**</u> ತಪಸೀಲು ಸ್ವತ್ತಿನಲ್ಲಿ 30 **X** 45 ಸ್ವತ್ತಿಗೆ ಕಂದಾಯ ದಾಖಲೆಗಳು ನಮೂಧಾಗಿ ಈ ವಿಸ್ತೀರ್ಣಕ್ಕೆ ಮಾತ್ರ ಬೇಲಿ ಹಾಕಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ರಾಮ್‌ಕುಮಾರ್‌ಸ್ವಾಮಿಯನ್ನು ನಾನು ಎಂದಿಗೂ ನೋಡಿಲ್ಲ. ಸದರಿ ರಾಮ್‌ಕುಮಾರ್‌ಸ್ವಾಮಿ ಈ ಸ್ವತ್ತಿನ ಸ್ವಾಧೀನಾನುಭವದಲ್ಲಿದ್ದಾರೆ ಎಂದರೆ ಸುಳ್ಳು. ಈಗ ತೋರಿಸುತ್ತಿರುವ ಛಾಯಚಿತ್ರದಲ್ಲಿರುವ ಸ್ವತ್ತು ಯಾವುದೇ ಎಂದು ನನಗೆ ಗೊತ್ತಿಲ್ಲ. ಸದರಿ ಸ್ವತ್ತು ಗ ದಾವಾಸ್ತಿ ಎಂದೆರ ಸುಳ್ಳು.

17. ಅಸಲು ದಾವೆ 486.2014 ನ್ನು ಶ್ರೀನಿವಾಸ್‌ಮೂರ್ತಿರವರು ವಾದಿ ಟ್ರಸ್ಟ್‌ನ ವಿರುದ್ದ ನೆಲಮಂಗಲ ಗ್ರಾಮದ ಸರ್ವೆ ನಂ.39 ರ 21 ಗುಂಟೆಗೆ ದಾವೆ ಹಾಕಿದ್ದಾರೆ ಎಂದರೆ ಸರಿ. ಸದರಿ 21 ಗುಂಟೆಗೆ ಶ್ರೀನಿವಾಸಮೂರ್ತಿ ತಂತಿ ಬೇಲಿ ಹಾಕಿಕೊಂಡಿದ್ದಾರೆ ಎಂದರೆ ಸುಳ್ಳು.

| O.S | 212/2018 |
| --- | --- |
| P.W. | 1 |

18. ಕ ದಾವಾಸ್ತಿಗೆ ನಾನು ಸುಳ್ಳು ಚೆಕ್ಕುಬಂಧಿಯನ್ನು ತೋರಿಸಿದ್ದೇನೆ ಎಂದರೆ ಸರಿಯಲ್ಲ. ಕ ದಾವಾಸ್ತಿಯ ದಕ್ಷಿಣಕ್ಕೆ ರಸ್ತೆ ಬಂದು ನಂತರ ಆಂಜನೇಯಸ್ವಾಮಿ ದೇವಸ್ಥಾನ ಹಾಗು ಕಲ್ಯಾಣಿ ಬರುತ್ತದೆ ಎಂದರೆ ದೇವಸ್ಥಾನ ದೂರದಲ್ಲಿದೆ. ಕ ದಾವಾಸ್ತಿಯ ಪಶ್ಚಿಮಕ್ಕೆ ರಸ್ತೆ ಬಂದು ಆಂಜನೇಯಸ್ವಾಮಿ ಬರುತ್ತದೆ ಎಂದರೆ ದಾವಾಸ್ತಿಯ ಸುತ್ತ ಕೇವಲ ಒಂದು ದೇವಸ್ಥಾನವಿದೆ ಅದು ದೂರದಲ್ಲಿದೆ. ನೆಲಮಂಗಲ ಗ್ರಾಮದ ಸರ್ವೆ ನಂ.39 ರ 1-10 ಗುಂಟೆ ಹಿಪ್ಪೇ ಆಂಜನೇಸ್ವಾಮಿ ಲೇಔಟ್‌ನಲ್ಲಿ ಬರುತ್ತದೆ ಎಂದರೆ ಸುಳ್ಳು.

19. ನಿಪಿ-2 ಹಾಗು 3 ವಾಜರಹಳ್ಳಿ ಗ್ರಾಮದ ಸರ್ವೆ ನಂ.39 ಕ್ಕೆ ಸಂಬಂಧಿಸಿದ ಕಾರಣ ದಾವಾಸ್ತಿಯಲ್ಲಿ ನಮಗೆ ಯಾವುದೇ ಹಕ್ಕಿಲ್ಲ ಎಂದರೆ ಸುಳ್ಳು. ದಾವಾಸ್ತಿಯ ಸ್ವಾಧೀನದಲ್ಲಿ ನಾವು ಇಲ್ಲ ಎಂದರೆ ಸರಿಯಲ್ಲ.

20. ಅಸಲು ದಾವೆ 435.2018 ನ್ನು ವಾದಿ ಇವ್ಯಾಂಜಲಿಕಲ್ ಚರ್ಚ್ ಆಫ್ ಇಂಡಿಯ ಹಾಗು ಇತರರ ವಿರುದ್ದ ಹಾಕಲಾಗಿದೆ ಎಂದರೆ ಸರಿ. ಕ ದಾವಾಸ್ತಿಯ 54½ x 40 ಅಡಿ ಜಾಗದಲ್ಲಿ ಇವ್ಯಾಂಜಲಿಕಲ್ ಚರ್ಚ್ ಆಫ್ ಇಂಡಿಯ ಒಂದು ಚರ್ಚ್‌ನ್ನು ನಿರ್ಮಿಸುತ್ತಿದ್ದಾರೆ ಎಂದರೆ ಸರಿ. ಸದರಿ 54½ x 40 ಅಡಿ ಜಾಗ ಇವ್ಯಾಂಜಲಿಕಲ್ ಚರ್ಚ್ ಆಫ್ ಇಂಡಿಯಕ್ಕೆ ಹೇಗೆ ಬಂದಿತು ಎಂದು ನನಗೆ ಗೊತ್ತಿಲ್ಲ. ಸದರಿ ಇವ್ಯಾಂಜಲಿಕಲ್ ಚರ್ಚ್ ಆಫ್ ಇಂಡಿಯ ನಾರಾಯಣಪ್ಪ ಹಾಗು ಶಶಿಧರ ರವರಿಂದ ಖರೀದಿಸಿದ್ದರು ಎಂದರೆ ನನಗೆ ಗೊತ್ತಿಲ್ಲ.

21. ಇದೇ ನ್ಯಾಯಾಲಯದಲ್ಲಿ ಇರುವ ಅಸಲು ದಾವೆ 211.2018 ರಿಂದ 218.2018, 435.2018 ಹಾಗು 486.2018 ರಲ್ಲಿರುವ ಪ್ರತಿವಾದಿಗಳು ನಾರಾಯಣಪ್ಪ ಹಾಗು ಶಶಿಧರ ರವರಿಂದ ಸಾಮಾನ್ಯ ಮೊಕ್ತಾರ್ ನಾಮೆಯ ಮೂಲಕ **ಕ** ದಾವಾಸ್ತಿಯಲ್ಲಿ ನಿವೇಶನಗಳನ್ನು ಖರೀದಿಸಿದ್ದಾರೆ ಎಂದರೆ ಸರಿ. ಖರೀದಿಸಿದ ದಿನಾಂಕದಿಂದ ಮೇಲೆ ತಿಳಿಸಿದ ಖರೀದಿದಾರರು ಅವರರವರ ಸ್ವತ್ತಿನ ಸ್ವಾಧೀನಾನುಭವದಲ್ಲಿದ್ದಾರೆ ಎಂದರೆ ಸುಳ್ಳು. ಸದರಿ ಖರೀದಿದಾರರು ಎಲ್ಲಾ ದಾಖಲೆಗಳನ್ನು ಪರಿಶೀಲಿಸಿ ನಂತರವೇ ಸ್ವತ್ತುಗಳನ್ನು ಖರೀದಿಸಿದ್ದಾರೆ ಎಂದರೆ ಸುಳ್ಳು. ಸದರಿ ದಾವೆ ಕಾನೂನಾತ್ಮಕವಾಗಿ ಸರಿಯಿಲ್ಲ ಎಂದರೆ ಸುಳ್ಳು. ನಾನು ಕೇಳಿದ ಪರಿಹಾರ ಕಾನೂನಾತ್ಮಕವಾಗಿ ನೀಡತಕ್ಕದ್ದಲ್ಲ ಎಂದರೆ ಸರಿಯಲ್ಲ. 1ನೇ ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. **ಗ** ದಾವಾಸ್ತಿಯಲ್ಲಿ ಇರುವ 2 ಅಂಗಡಿಗಳ ಬಗ್ಗೆ ನನಗೆ ಯಾವಾಗ ತಿಳಿಯಿತು ಎಂದರೆ 2014-15ನೇ ಸಾಲಿನಲ್ಲಿ ತಿಳಿಯಿತು. 1ನೇ ಪ್ರತಿವಾದಿ **ಗ** ದಾವಾಸ್ತಿಯನ್ನು ಖರೀದಿಸಿದ್ದ ವಿಷಯ ನನಗೆ ತಿಳಿದಿದ್ದರೂ ಸಹ ಅಸಲು ದಾವೆ 268.2009 ಹಾಗು 21.2017 ರಲ್ಲಿ ಪಕ್ಷಗಾರರನ್ನಾಗಿ ಮಾಡದೇ ತೀರ್ಪನ್ನು ಪಡೆದುಕೊಂಡಿದ್ದೇನೆ ಎಂದರೆ ಸುಳ್ಳು.

22. ಒಂದು ವೇಳೆ ನೆಲಮಂಗಲ ಗ್ರಾಮದ ಸರ್ವೆ ನಂ.39 ನ್ನು ಖರೀದಿಸಿದ್ದೇ ಆಗಿದ್ದರೆ ಅಂದೇ ಕ್ರಯಪತ್ರವನ್ನು ಪರಿಶೀಲಿಸಿ ತಿದ್ದುಪಡಿಗೆ ದಾವೆಯನ್ನು ಸಲ್ಲಿಸುತ್ತಿದ್ದೇವು, ವಾಜರಹಳ್ಳಿ ಗ್ರಾಮದ ಸರ್ವೆ ನಂ.39 ನ್ನು ಖರೀದಿಸಿದ್ದರ ಕಾರಣ ತಿದ್ದುಪಡಿಗೆ ದಾವೆ ಸಲ್ಲಿಸಿಲ್ಲ ಎಂದರೆ ಸುಳ್ಳು. ನಿಪಿ-1 ನ್ನು ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ನಿಪಿ-2 ಮತ್ತು 3 ದಾವಾಸ್ತಿಗೆ ಸಂಬಂಧಿಸಿದ್ದಲ್ಲ ಎಂದರೆ ಸುಳ್ಳು. ನಿಪಿ-13ನ್ನು 2017-18 ರಲ್ಲಿ ದೃಢೀಕೃತ ನಕಲನ್ನು ಪಡೆದಿದ್ದೇನೆ. ಅಸಲು ದಾವೆ 21.2017 ರ ತೀರ್ಪು ದಿನಾಂಕ 16-09-2019 ರಲ್ಲಿ ಆದ ಕಾರಣ 1ನೇ ಪ್ರತಿವಾದಿಯನ್ನು ಪಕ್ಷಗಾರರನ್ನಾಗಿ ಮಾಡಲು ಈ ಕಾರಣದಿಂದ ತೊಂದರೆ ಇರಲಿಲ್ಲ ಎಂದರೆ ವಕೀಲರನ್ನು ಕೇಳಬೇಕು. ಸದರಿ ದಾವೆ ನಿಲ್ಲತಕ್ಕದ್ದಲ್ಲ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಮುಂದುಡಲಾಯಿತು.

(ಈ ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೇ ಸ ಇದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ
ನ್ಯಾಯಿಕ ದಂಡಾಧಿಕಾರಿಗಳು, ನೆಲಮಂಗಲ